ಡ್ಯೂಟಿಗೆ ರಜೆ ಹಾಕಿ ಬಂದು ತಿಥಿ ಕಾರ್ಡುಗಳನ್ನ ಊರೂರು ಅಡಿ ನೆಂಟರಿಷ್ಟರುಗಳಿಗೆ ಹಂಚಿಕೊಂಡು ಬರುವಾಗ, ಕವಿ ಬ್ಯಾಲಳ್ಳಿ ಚಲಪತಿ ಏರಿ ಮ್ಯಾಲೆ ಮಂಜನಿಗೆ ಎದುರುಬದುರಾದ. ಮಂಜ ತನ್ನ ಗಾಡಿ ನಿಲ್ಲಿಸಿ ಕವಿಗೆ ನಮಸ್ಕಾರ ಹಾಕಿ ನಯ ವಿನಯದಿಂದ, 'ಸರ್ ನಮ್ಮಪ್ಪ ಹನುಮಯ್ಯ ಹೀಗೆ ತೀರೋಗಿಬಿಟ್ಟ, ಅವರ ತಿಥಿ ಕಾರ್ಯವನ್ನ ಹೀಗೆ ಭಾನ್ವಾರ ಇಟ್ಟುಕೊಂಡಿದ್ದೇವೆ, ತಾವು ಬರಲೇಬೇಕು' ಎಂದು ಕಾರ್ಡ್ ಕೊಟ್ಟ. 'ಛೇ ನಿಮ್ಮಪ್ಪ ಎಂಥ ವಿಜ್ಞಾನಿನಯ್ಯ, ಕೆಲವ್ರೆಲ್ಲ ಮೋಡ ನೋಡಿ ಇವತ್ತ ಮಳೆ ಬರುತ್ತೆ ಬರಲ್ಲ ಅನ್ನದ ಹೇಳಿರೆ, ಈತ ನೆಲ ಮೂಸಿ ಇವತ್ತು ಮಳೆ ಬರುತ್ತೆ ಬರಲ್ಲ ಅನ್ನದ ಹೇಳನು, ಅಂಗೇ ಆಗದು, ಅಂಥರಲ್ಲ ಇಲ್ಲಿರ್‍ಬಾರ್‍ದಾಗಿತ್ತು, ಕೃಷಿ ವಿಶ್ವವಿದ್ಯಾಲಯಗಳಲ್ಲಿ ಇರ್‍ಬೇಕಾಗಿತ್ತು, ಪಾಪ ಸತ್ತಿದ್ದಿನ ನಾನು ಊರಲ್ಲಿ ಇರ್‍ಲಿಲ್ಲ, ತಿಥಿದಿನ ಗ್ಯಾರಂಟಿ ಬತ್ತಿನಿ, ಹನುಮಯ್ಯನ ಋಣ ನನ್ಮೇಲೆ ಐತೆ' ಎಂದು ಬಾಯಿತುಂಬಾ ಹೇಳಿದ್ದ. ಇದರಿಂದ ಉತ್ತೇಜನಗೊಂಡ ಮಂಜ, 'ನಮ್ಮವ್ವ ಹೇಳ್ತಿತ್ತು ಸಾ, ನಮ್ಮಪ್ಪ ನಿಮಿಗೆ ಕೊಡಕೆ ಅಂತವ ನಾಟಿ ಕೋಳಿ ಮೊಟ್ಟೆನ ಮಡಗಿತ್ತಂತೆ. ಅಷ್ಟ್ರಲ್ಲಿ ಹೋಗೆಬಿಡ್ತು' ಅಂದ. 'ದೇವ್ರಂತ ಮನ್ಸ ಕಣಪ್ಪ ಎಲ್ಲಾರ ಉಂಟ' ಅಂತ ಇನ್ನಷ್ಟು ಪ್ರೋತ್ಸಾಹದ ಮಾತಾಡಿ ಕಾರ್ಡನ್ನ ಟ್ಯಾಂಕ್ ಕವರ್‌ಗೆ ಇಟ್ಟುಕೊಂಡು ಮುಂದಕ್ಕೆ ಗಾಡಿ ಬಿಟ್ಟ.

ತಿಥಿ ದಿನ ಅನ್ನದು ಬಂದೇ ಬಿಡ್ತು. ಕವಿ ಚಲಪತಿಗೆ ಹಿಂದಿನ ದಿನದಿಂದಲೂ ಕಾಡಲು ಶುರುವಾಯಿತು. ಯಾಕೆಂದರೆ ತನ್ನ ಹೆಂಡತಿ ತುಳಸೀದೇವಿ ಅವರನ್ನು ಅವತ್ತು ನಗರದ ಮಹಿಳಾ ಒಕ್ಕೂಟದ ಸಭೆ ಯೊಂದಕ್ಕೆ ಬರ ಬೇಕೆಂದು ವಾರದ ಹಿಂದಿನಿಂದಲೂ ಹೇಳಿಕೊಂಡಿದ್ದಳು. ಮಹಿಳೆಯರು ತಮ್ಮ ಒಕ್ಕೂಟದ ವಾರ್ಷಿಕ ಸಭೆಯ ದಿವ್ಯ ಸಾನ್ನಿಧ್ಯಕ್ಕೆ ಪರಮಪೂಜ್ಯ ಸ್ವಾಮೀಜಿಗಳೊಬ್ಬರನ್ನ ಆಹ್ವಾನಿಸಿದ್ದರು. ಆ ಸ್ವಾಮಿಗಳೂ ಬರಲು ಒಪ್ಪಿದ್ದರು. ಆದರೆ ಅವರಿಗೆ ಕಂಪನಿ ಕೊಡುವ ಒಬ್ಬ ವಿದ್ಯಾವಂತ ಗಂಡಸು ಬೇಕಾಗಿತ್ತು. ಅದಕ್ಕೆ ತುಳಸೀದೇವಿಯವರ ಗೆಳತಿಯರೆಲ್ಲ 'ಬೇರೆ ಎಲ್ಲಿ ಯಾರನ್ನ ಹುಡ್ಕನಮ್ಮ, ನಿಮ್ಮನೆರೆಯ ಕವಿತೆ-ಗಿವಿತೆ ಬರೀತಾರಂತಲ್ಲ ಅವ್ರನ್ನೆ ಕರ್‍ಸದಪ್ಪ' ಅಂತ ಒತ್ತಾಯಿಸಿದ್ದರು. 'ಅಯ್ಯೋ ನಮ್ಮನೆದ್ಕೆ ಈ ಸ್ವಾಮಿಗಳು ಅಂಥರು ಇಂಥರು ಅಂದ್ರೆ ಆಗಲ್ಲ, ಕೇಳಿನೋಡ್ತಿನಿ' ಅಂದಿದ್ದಳು. ಅದರಂತೆ ಗಂಡನನ್ನು ಕೇಳಲಾಗಿ 'ನನಗೆ ಇಂಟರೆಸ್ಟ್ ಇಲ್ಲ, ನಿನ್ನ ಸಲುವಾಗಿ ಬರಬೇಕಷ್ಟೇ' ಎಂದು ಅಡ್ಡಗೋಡೆ ಮೇಲೆ ದೀಪ ಇಟ್ಟಿದ್ದನು. ಭಾನುವಾರ ಎಂಬುದು ನಾಳೆ ಎನ್ನುವಾಗ ಕವಿಗೆ ಅಲ್ಲಿ ಸ್ವಾಮೀಜಿಯ ಪಕ್ಕ ಕೂತು ಮಾಗಾಡದ್ಕಿಂತ ಬ್ಯಾಲಳ್ಳಿಗೋಗಿ ಹನುಮಯ್ಯನ ತಿಥಿ ಕಾರ್ಯದಲ್ಲಿ ಚೆನ್ನಾಗಿ ಬಾಡು ತಿನ್ನಬಹುದಲ್ಲ ಎಂಬ ಆಸೆ ಚಿಗುರಿತ್ತು. ಕವಿ ಗೊಂದಲಕ್ಕೆ ಬಿದ್ದರು. ನಾನು ಬರಲ್ಲ ನೀನು ಹೋಗಿ ಬಾ ಡ್ರೈವರ್‌ಗೆ ಕಳುಸ್ತಿನಿ ಎಂದು ಹಟ ಹಿಡಿಯತೊಡಗಿದರು. ಈಗ ಕಾಲ ಮೀರಿ ಹೋಗಿತ್ತು, ನೀನು ಬರಲೇಬೇಕು ನಾನು ಎಲ್ಲರಿಗೂ ಹೇಳಿಕೊಂಡದ್ದಾಗಿದೆ, ಇನ್ವಿಟೇಷನ್‌ನಲ್ಲಿ ಹೆಸರಾಕಿದ್ದಾಗಿದೆ ಎಂದು ದುಂಬಾಲು ಬಿದ್ದಳು. 'ಆಯ್ತು ಬರ್‍ತಿನಿ. ಆದರೆ ನಾನು ಸ್ವಾಮಿಗಳು ಇರುವಷ್ಟು ಕಾಲವೂ ಅಲ್ಲಿರಲಾಗದು. ಒಂದು ಗಂಟೆಗೆಲ್ಲ ಮುಖ್ಯದ ಕೆಲಸವಿದೆ ನಾನು ಹೊರಡ್ತೀನಿ' ಅಂತ ಮೊದಲೇ ಒಪ್ಪಂದ ಮಾಡಿಕೊಂಡಿದ್ದ.

ಮನಸ್ಸಿಲ್ಲದ ಮನಸ್ಸಿನಲ್ಲಿ ಕವಿ ಕಾರ್ಯಕ್ರಮಕ್ಕೆ ಹೊರಟರು. ಮಹಿಳಾ ಮಣಿಗಳು ಚಂದದ ಸೀರೆ, ಒಡವೆಗಳನ್ನು ಹಾಕಿಕೊಂಡು ಹೂ ಮುಡಿದು ಮಿಂಚುತ್ತಿದ್ದರು. ಕವಿಯೊಂದು ಜುಬ್ಬಾ ಹಾಕಿಕೊಂಡು ಸ್ವಾಮೀಜಿಯ ಪಕ್ಕವೇ ಹೋಗಿ ಕೂತರು. ಸ್ವಾಮಿಗಳೂ ಕವಿಯನ್ನು ಪುರಾತನ ಪರಿಚಯದವರಂತೆ ಕುಶಲೋಪರಿ ಮಾತಾಡುತ್ತ ವಿಚಾರಿಸಿಕೊಳ್ಳುತ್ತಿದ್ದರು. ಸ್ವಾಮಿಗಳಿಗೆ ಫಲ-ಪುಷ್ಪ ಎಲ್ಲವನ್ನೂ ತಂದು ಕವಿಯ ಮುಖಾಂತರವೇ ಕೊಡಿಸಿದರು. ಕವಿ ಮನಸೊಪ್ಪಿಯೋ ಒಪ್ಪದೆಯೋ

